ಅಧ್ಯಕ್ಷರು:– ಎಸ್.ಟಿ. ಸೋಮಶೇಖರ್ ಪ್ರಶ್ನೆ ಕೇಳಿ. ಹೆಚ್.ಸಿ. ಬಾಲಕೃಷ್ಣರವರೆ ಕೇಳಿ.

ಡ್ಯಾಂ ನಿರ್ಮಾಣದ ಬಗ್ಗೆ.

67(1273); ಶ್ರೀ ಹೆಚ್.ಸಿ. ಬಾಲಕೃಷ್ಣ

ಅ) ಮೇಕೆದಾಟು ಬಳಿ ಕಾವೇರಿ ನದಿಗೆ ಅಡ್ಡಲಾಗಿ ಡ್ಯಾಂ ನಿರ್ಮಿಸುವ ಪ್ರಸ್ತಾವನೆಯು ಸರ್ಕಾರದ ಮುಂದಿದೆಯೇ;

ಆ) ಹಾಗಿದ್ದಲ್ಲಿ, ಡ್ಯಾಂ ನಿರ್ಮಾಣ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು;

ಇ) ಡ್ಯಾಂ ನಿರ್ಮಾಣ ಮಾಡುವುದರಿಂದ ಯಾವ್ಯಾವ ಜಿಲ್ಲೆಗಳಿಗೆ ನೀರನ್ನು ಒದಗಿಸಲಾಗುವುದು? (ಯೋಜನೆಯ ಸಂಪೂರ್ಣ ವಿವರಗಳನ್ನು ನೀಡುವುದು)

ಶ್ರೀ ಎಂ.ಬಿ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಹೌದು.

ಆ) ಮೇಕೆದಾಟುವಿನ ಮೇಲ್ಭಾಗದಲ್ಲಿ ಕಾವೇರಿ ನದಿಗೆ ಅಡ್ಡಲಾಗಿ ಸಮತೋಲನ / ಶೇಖರಣಾ ಜಲಾಶಯಗಳನ್ನು ನಿರ್ಮಿಸಲು ತನಿಖೆ, ಸರ್ವೆ, ವಿನ್ಯಾಸ ನಕ್ಷೆ ಹಾಗೂ ಅಂದಾಜುಗಳ ತಯಾರಿಕೆ, ವಿವರವಾದ ಯೋಜನಾ ವರದಿಯ ತಯಾರಿಕೆ, ಇತ್ಯಾದಿಗಳಿಗಾಗಿ ಸಮಾಲೋಚಕರನ್ನು ಪೂರ್ವಾರ್ಹತೆಗೊಳಿಸಿ ಪಟ್ಟಿ ಮಾಡುವ ಸಲುವಾಗಿ ದಿನಾಂಕ:25–10–2014 ರಂದು Global Expression of Interest ಅನ್ನು ಆಹ್ವಾನಿಸಿದ್ದು, ರಾಷ್ಟ್ರಮಟ್ಟದ ಹಾಗೂ ಅಂತರರಾಷ್ಟ್ರೀಯ ಮಟ್ಟದ ವೃತ್ತ ಪತ್ರಿಕೆಗಳಲ್ಲಿ ಕಾವೇರಿ ನೀರಾವರಿ ನಿಗಮದಿಂದ ಪ್ರಕಟಗೊಳಿಸಲಾಗಿರುತ್ತದೆ. ಸಮಾಲೋಚಕರಿಂದ ಪ್ರಸ್ತಾವನೆಯನ್ನು ಪಡೆಯುವ ಕೊನೆಯ ದಿನಾಂಕವನ್ನು 31–12–2014 ಕ್ಕೆ ನಿಗದಿಪಡಿಸಲಾಗಿದೆ.

ಇ) ವಿವರವಾದ ಯೋಜನಾ ವರದಿಯು ಸ್ವೀಕೃತವಾದ ನಂತರ, ನಿಯಮಾನುಸಾರ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಹೆಚ್.ಸಿ. ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಮಾನ್ಯ ಮಂತ್ರಿಗಳು ನೀಡಿರುವ ಸ್ಟೇಟ್‌ಮೆಂಟ್ ಓದಿದ್ದೇನೆ, ಮೊದಲನೆಯದಾಗಿ ಸರ್ಕಾರಕ್ಕೆ ಧನ್ಯವಾದಗಳನ್ನರ್ಪಿಸುತ್ತೇನೆ. ಎರಡನೆಯದಾಗಿ ನೀವು ಗ್ಲೋಬಲ್ ಟೆಂಡರ್ ಕರೆದಿದ್ದು, ಅದನ್ನು ಈ ತಿಂಗಳ ಕೊನೆಯಲ್ಲಿ ಆ ಟೆಂಡರ್ ಫೈನಲೈಜ್ ಮಾಡುತ್ತೀರೆಂದು ಹೇಳಿದ್ದೀರಿ. ನನ್ನ ಮೂಲಭೂತವಾದಂತಹ ಪ್ರಶ್ನೆ ಏನೆಂದರೆ; ತಮಿಳುನಾಡಿನಲ್ಲಿ ಮೇಕೆದಾಟು ವಿಚಾರದಲ್ಲಿ ಹೋರಾಟ ನಡೆಯುತ್ತಿದೆ. ಅವರು ಇದರ ವಿಚಾರದಲ್ಲಿ ಸುಪ್ರೀಂಕೋರ್ಟ್ ಮೆಟ್ಟಲು ಹತ್ತಿದ್ದಾರೆನ್ನುವ ವಿಚಾರವನ್ನು ನಾವು ಮಾಧ್ಯಮದಲ್ಲಿ ಓದಿದ್ದೇವೆ. ಅದರ ವಿಚಾರದಲ್ಲಿ ನೀವೇನಾದರೂ ಮಾಡುತ್ತಿದ್ದೀರಾ? ಅವರು ಸುಪ್ರೀಂ ಕೋರ್ಟ್‌ಗೆ ಹೋಗಿ ಏನಾದರೂ ಸ್ಟೇ ತೆಗೆದುಕೊಂಡು ಬಂದಮೇಲೆ ಕಾಮಗಾರಿ ಕೆಲಸಗಳನ್ನು ಮಾಡುವುದಕ್ಕೆ ಆಗುವುದಿಲ್ಲ. ಅದಕ್ಕೆ ಆ ವಿಚಾರವಾಗಿ ನಮ್ಮ ಸರ್ಕಾರದ ನಿಲುವೇನು? ನೀವು ಕೂಡ ಸುಪ್ರೀಂ ಕೋರ್ಟ್‌ನಲ್ಲಿ ಲಾಯರ್‌ಗಳನ್ನು ಇಟ್ಟು ಅದರ ವಿಚಾರದಲ್ಲಿ ನೋಡುತ್ತಿದ್ದೀರಾ? ಲೋಕಸಭಾ ಸದಸ್ಯರಾದ ಮಾನ್ಯ ಅನಂತ ಕುಮಾರ್ ಒಂದು ಮಾತು ಹೇಳಿದರು. ನಮ್ಮ ಜೊತೆ ಮಾನ್ಯ ಮುಖ್ಯಮಂತ್ರಿಗಳು ಹಾಗೂ ತಾವು ಬಂದರೆ ನಾನು ಸರ್ಕಾರದ ವತಿಯಿಂದ . . .

ಅಧ್ಯಕ್ಷರು:– ಅದೆಲ್ಲ ಬೇಡ, ಇಲ್ಲಿ ಏನು ಆಗಬೇಕೆಂದು ಹೇಳಿ.

ಶ್ರೀ ಹೆಚ್.ಸಿ. ಬಾಲಕೃಷ್ಣ:– ಇದು ಬಹಳ ವಿಶೇಷವಾದಂತಹ ವಿಚಾರ, ಇಲ್ಲಿ ಏನಾಗಿದೆ ಎಂದು ನಮಗೆ ಅರ್ಥವಾಗಬೇಕಲ್ಲ. ದಯಮಾಡಿ ನನಗೆ ಸ್ವಲ್ಪ ಅವಕಾಶ ಕೊಡಿ.

ಅಧ್ಯಕ್ಷರು:– ನೀವು ಪ್ರಶ್ನೆ ಕೇಳಿ, ಇಲ್ಲಿ ಚರ್ಚೆಗೆ ಅವಕಾಶ ಇಲ್ಲ.

ಶ್ರೀ ಹೆಚ್.ಸಿ. ಬಾಲಕೃಷ್ಣ:– ನೀವು ಮತ್ತು ಮುಖ್ಯಮಂತ್ರಿಗಳು ಲೋಕಸಭಾ ಸದಸ್ಯರನ್ನು ಕರೆದುಕೊಂಡು ಹೋಗಿ ಕೇಂದ್ರ ಸರ್ಕಾರದ ಮೇಲೆ

ಒತ್ತಾಯ ತರುವಂತಹ ಕೆಲಸವನ್ನು ಮಾಡುತ್ತಿದ್ದೀರಾ? ಇಷ್ಟಕ್ಕೆ ನಾನು ವಿವರಣೆಯನ್ನು ಕೇಳುತ್ತಿದ್ದೇನೆ.

ಶ್ರೀ ಕೆ.ಆರ್. ರಮೇಶ್ ಕುಮಾರ್:– ಇದು ಬಹಳ ಮುಖ್ಯವಾಗಿರುವಂತಹ ಪ್ರಶ್ನೆ. In the public interest ಇಲ್ಲಿ ನಮ್ಮ strategies ಏನೆಂದು ಚರ್ಚೆ ಮಾಡುವುದು ಬೇಡ. ದಯಮಾಡಿ ಮಾನ್ಯ ಮಂತ್ರಿಗಳು ಎಲ್ಲರನ್ನು ಕರೆಯಲಿ, ಅದರ ಬಗ್ಗೆ ಕುಳಿತುಕೊಂಡು ಮಾತನಾಡೋಣ. ನಾವು party ಆಗಿದ್ದೇವೋ ಇಲ್ಲವೋ, ಇದೆಲ್ಲ ಬಹಳ sensitive matter. ದಯಮಾಡಿ convention of this House is; we don't discuss these things on the floor of the House. ಮಂತ್ರಿಗಳು ಒಂದು ಸಭೆಯನ್ನು ಕರೆಯಲಿ, ಅಲ್ಲಿ ಚರ್ಚೆ ಮಾಡೋಣ. ದಯಮಾಡಿ, please . . .

ಶ್ರೀ ಎಂ.ಬಿ. ಪಾಟೀಲ್:– ಮಾನ್ಯ ಅಧ್ಯಕ್ಷರೆ, ನಾವು ಒಂದು ಸಭೆಯನ್ನು ಕರೆದು ಅಲ್ಲಿ ಚರ್ಚೆ ಮಾಡುತ್ತೇವೆ.

ಅಧ್ಯಕ್ಷರು:– ಆಯಿತು. ಬಾಲಕೃಷ್ಣರವರೆ, ಆ ರೀತಿ ಮಾಡಲಿ.

ಶ್ರೀ ಹೆಚ್.ಸಿ. ಬಾಲಕೃಷ್ಣ:– ಮಾನ್ಯ ಅಧ್ಯಕ್ಷರೆ, ಈ ಅಧಿವೇಶನ ಮುಗಿಯುವುದರೊಳಗೆ ಸಭೆಯನ್ನು ಮಾಡಲಿ.

ಅಧ್ಯಕ್ಷರು:– ಭೂಸನೂರ ರಮೇಶ್ ಬಾಳಪ್ಪನವರು ಕೇಳಿ. ಅವರು ಇಲ್ಲ. ಭೀಮಾನಾಯ್ಕ್ ಇಲ್ಲ.

ಸಾಮಾಜಿಕ ಅರಣ್ಯ ವಿಭಾಗದಲ್ಲಿ ಕಾರ್ಯ ನಿರ್ವಹಣೆಯ ಬಗ್ಗೆ.

66(818); ಶ್ರೀ ಬೋಪಯ್ಯ ಕೆ.ಜಿ. (ವಿರಾಜಪೇಟೆ)

ಅ) ಕೊಡಗು ಜಿಲ್ಲೆಯ ಸಾಮಾಜಿಕ ಅರಣ್ಯ ವಿಭಾಗದಲ್ಲಿ ಎಷ್ಟು ಅಧಿಕಾರಿ ಇದ್ದಾರೆ: ಇವರ ಕಾರ್ಯ ವ್ಯಾಪ್ತಿಯ ವಿವರಗಳನ್ನು ಒದಗಿಸುವುದು;

ಆ) ಈ ವಿಭಾಗದಲ್ಲಿ 2012–13, 2013–14 ಮತ್ತು 2014–15ನೇ ಸಾಲಿನಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ;